(೨೩) ಕುಂದಾಪುರ ತಾಲ್ಲೂಕಿನ ಕೋಡಿಯಿಂದ ಕನ್ಯಾನದವರೆಗಿನ ರಸ್ತೆಯನ್ನು ಸರ್ವ ಋತು ರಸ್ತೆಯಾಗಿ ಮಾಡುವುದು

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಮೀನುಗಾರರೇ ಅಧಿಕವಾಗಿ ವಾಸವಾಗಿರುವ ಭಾಗವಾದ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಡಿಯಿಂದ ಉಡುಪಿ ತಾಲ್ಲೂಕಿನ ಕೋಡಿ ಕನ್ಯಾನದವರೆಗೆ ಮೀನುಗಾರಿಕೆಗೆ ಅಗತ್ಯವಾದ ರಸ್ತೆ ಕೆಲವು ವರ್ಷಗಳ ಹಿಂದೆಯೇ ಸಾರ್ವಜನಿಕ ಕಾಮಗಾರಿ ಇಲಾಖೆಯಿಂದ ರಚಿತವಾಗಿದ್ದರೂ, ಆ ರಸ್ತೆಯ ಪಕ್ಕಕ್ಕೆ ಕುಂದಾಪುರ ಕೋಡಿ ಭಾಗಕ್ಕೆ ಇನ್ನೂ ಡಾಮರಿನ ಹೊದಿಕೆ ಆಗದಿರುವುದರಿಂದ ಜನರಿಗೂ ವಾಹನಗಳಿಗೂ ತೊಂದರೆ ಆಗಿದೆ. ಹಾಕಿದ ಜಲ್ಲಿ ಕಿತ್ತು ಹಾಳಾಗುತ್ತಿದೆ. ವಾಹನಗಳ ಚಕ್ರಗಳು ಹಾಳಾಗುತ್ತಿವೆ, ನಡೆಯುವ ಜನರ ಕಾಲಿಗೆ ಕಲ್ಲುಗಾಗಿ ಕರಾವಳಿಯಲ್ಲಿ ಕಣ್ಣೀರ ಕೋಡಿ ಹರಿಯುವಂತಾಗಿದೆ. ಈ ಬಿಕ್ಕಟ್ಟನ್ನು ಪರಿಹರಿಸಲು ತೆಕ್ಕಟ್ಟಿ-ಕೋಡಿ ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಮಾರ್ಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

(೨೪) ಲೋಟೆನ್‌ಷನ್‌ನಿಂದ ಸಣ್ಣ ಕೈಗಾರಿಕೆಗಳಿಗೆ ಉಂಟಾದ ತೊಂದರೆ ಬಗ್ಗೆ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಲೋಟೆನ್‌ಷನ್ ಮಿತಿಯನ್ನು ೨೦೦ ಹೆಚ್ ಪಿ ಯಿಂದ ೧೦೦ ಹೆಚ್ ಪಿ ಗೆ ಇಳಿಸಿದ್ದುದರಿಂದ ಅನೇಕ ಸಣ್ಣ ಕೈಗಾರಿಕೆಗಳಿಗೆ ತುಂಬಲಾರದ ನಷ್ಟ ಹಾಗೂ ತೊಂದರೆಯಾಗಿರುತ್ತದೆ. ಈ ಮಿತಿಯನ್ನು ಇಳಿಸುವ ಯಾವ ಸೂಚನೆಯೂ ಇಲ್ಲದೆ ಈ ತೀರ್ಮಾನ ತೆಗೆದುಕೊಂಡಿರುವುದರಿಂದ ಸಣ್ಣ ಕೈಗಾರಿಕೆಗಳ ಪರಿಗೆ ತುಂಬ ತೊಂದರೆಯಾಗಿರುತ್ತದೆ. ಇದರಿಂದ ಕೈಗಾರಿಕೆಯವರಿಗೆ ತೊಂದರೆ ವಿನಃ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರಿಗೆ ಯಾವ ಲಾಭವೂ ಇಲ್ಲ. ಏಕೆಂದರೆ ಲೋಟೆನ್‌ಷನ್ ಬಳಕೆದಾರರರು ಯೂನಿಟ್ ಒಂದಕ್ಕೆ ರೂ. ೬–೭೫ ಪೈಸೆಯಂತೆ ಹಣ ತುಂಬುತ್ತಾರೆ. ಇದರಿಂದ ವಿದ್ಯುಚ್ಛಕ್ತಿ ಮಂಡಲಿಯವರಿಗೂ ವರಮಾನ ಕಡಿಮೆಯಾಗುತ್ತದೆ. ಮತ್ತು ಕೈಗಾರಿಕೆಗಳವರಿಗೆ ಹೈಟೆನ್‌ಷನ್‌ಗಾಗಿ ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳ ಹೆಚ್ಚು ಹಣ ವಿರ್ಚು ಮಾಡಬೇಕಾಗಿದೆ. ಪ್ರಾರಂಭ ಬಂಡವಾಳ ಮೀರಿರುವುದರಿಂದ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗುವುದಲ್ಲದೆ ಸಣ್ಣ ಕೈಗಾರಿಕೆಗಳೇ ನಿಂತು ಹೋಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಮೊದಲಿನ ವ್ಯವಸ್ಥೆಯನ್ನೇ ಸಣ್ಣ ಕೈಗಾರಿಕೆಯವರಿಗೆ ಮುಂದುವರಿಸಲು ಒತ್ತಾಯಿಸುತ್ತೇನೆ.

ಉದಾಹರಣೆಗೆ.—ಒಂದು ಕೈಗಾರಿಕೆಗೆ ೯೫ ಹೆಚ್ ಪಿ ವಿದ್ಯುಚ್ಛಕ್ತಿ ಸರಬರಾಜಿದ್ದು ಕಾರಣಾಂತರದಿಂದ ನವೀಕರಣಕ್ಕಾಗಿಯೋ ಅಥವಾ ಬೇರೆ ಇನ್ನಾವ ಕಾರಣಕ್ಕಾಗಿಯೋ ಹತ್ತರಿಂದ ಹದಿನೈದು ಹೆಚ್. ಪಿ. ವಿದ್ಯುಚ್ಛಕ್ತಿ ಬೇಕಾದ ಪ್ರಸಂಗವಿದ್ದಾಗ ಒಟ್ಟು ವಿಂತಿ ನೂರು ಹೆಚ್.ಪಿ.ಗಳಿಗಿಂತ ಮೀರುವುದರಿಂದ ಲಕ್ಷಾಂತರ ರೂಪಾಯಿಗಳ ಬಂಡವಾಳ ತೆರಬೇಕಾದ ತೊಂದರೆ ಕೈಗಾರಿಕೆಗಳಿಗಾಗಿದೆ. ಆದುದರಿಂದ ಮೊದಲಿನ ಪದ್ಧತಿಯನ್ನೇ ಮುಂದುವರಿಸುವುದು. ಒಂದು ಪಕ್ಷ ಈ ಪದ್ಧತಿಯನ್ನು ಮುಂದುವರಿಸಲು ಸಾಧ್ಯವಿಲ್ಲದಿದ್ದಲ್ಲಿ ಈ ಹೊಸ ಸೂತ್ರವನ್ನು ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆಗಳಿಗೆ ಮಾತ್ರ ಅನ್ವಯಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಾಣಿಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ. ಲೋಟೆನ್‌ಷನ್ ಮಿತಿಯನ್ನು ೨೦೦ ಹೆಚ್‌ಪಿಯಿಂದ ೧೦೦ ಹೆಚ್‌ಪಿಗೆ ಇಳಿಸಿದುದರ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ. ಎರಡನೆಯದಾಗಿ ಈಗ ಕೈಗಾರಿಕೆಗೆ ೯೫ ಹೆಚ್.ಪಿ. ವಿದ್ಯುಚ್ಛಕ್ತಿ ಸರಬರಾಜು ಇದ್ದು ಕಾರಣಾಂತರದಿಂದ ಅದರ ನವೀಕರಣಕ್ಕಾಗಿಯೋ ಮತ್ತಾವುದಕ್ಕಾದರೂ ೧೦–೧೫ ಹೆಚ್.ಪಿ. ವಿದ್ಯುಚ್ಛಕ್ತಿ ಬೇಕಾದರೆ, ಅದು ಸಿಗದೇ ಹೋದರೆ ಆ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗುತ್ತದೆ ಅಂತ ಹೇಳಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಒಂದು ಹೊಸ ಸೂತ್ರ ಹೊಸದಾಗಿ ಪ್ರಾರಂಭಿಸುವ ಕೈಗಾರಿಕೆಗಳಿಗೆ ಮಾತ್ರ ಅನ್ವಯಿಸಬೇಕೆಂದು ಹೇಳಿದ್ದಾರೆ ಅದೂ ಸಹ ಸರಿಯಾಗಿದೆ.